ಮೊದಲೆರೆಡು ಪುಸ್ತಕಗಳಲ್ಲಿ ಸಾಂಪ್ರದಾಯಿಕ ಜಪಾನಿ ಶೈಲಿಯನ್ನು ಮುರಿಯಲು ಪ್ರಯತ್ನಿಸಿದ್ದೆ. ಅಂದರೆ, ಚೌಕಟ್ಟನ್ನು ಮಾತ್ರ ಉಳಿಸಿಕೊಂಡು ಒಳಗಿನ ಹೂರಣವನ್ನು ಹೊಸರೀತಿಯಲ್ಲಿ ತುಂಬಿದ್ದೆ. ಅದನ್ನು ಯಶಸ್ವಿಯಾಗಿ ಮಾಡುವುದು ಹೇಗೆ ಎನ್ನುವುದು 1982ರಲ್ಲಿ ಮೂರನೆಯ ಪುಸ್ತಕ 'A Wild Sheep Chase' ಬರೆದ ಮೇಲೆ ಕಂಡುಕೊಂಡೆ. ಮೊದಲೆರೆಡು ಕಾದಂಬರಿಗಳು ಕಲಿಕೆಗೆ ಸಹಕಾರಿಯಾದವು. 'A Wild Sheep Chase' ನನ್ನ ಶೈಲಿಯ ಮೊದಲಹೆಜ್ಜೆ.

ಅದರ ಅನಂತರ ಬಂದ ಪುಸ್ತಕಗಳ ವಿನ್ಯಾಸ ಸಂಕೀರ್ಣವಾಯಿತು. ಪ್ರತಿ ಬಾರಿ ಹೊಸ ಪುಸ್ತಕ ಬರೆಯುವಾಗ ಹಳೆಯ ಶೈಲಿಯನ್ನು ಒಡೆದು ಹೊಸತನ್ನು ಸೃಷ್ಟಿಸುತ್ತೇನೆ. ಹೊಸ ವಸ್ತು ಇಲ್ಲವೇ ಹೊಸ ದೃಷ್ಟಿಕೋನವನ್ನು ಪುಸ್ತಕಕ್ಕೆ ನೀಡುತ್ತೇನೆ. ವಿನ್ಯಾಸದ ಕುರಿತು ಯಾವಾಗಲೂ ಎಚ್ಚರದಿಂದಿರುತ್ತೇನೆ. ವಿನ್ಯಾಸ ಬದಲಾದರೆ ನನ್ನ ಗದ್ಯದ ಶೈಲಿ ಬದಲಾಗಬೇಕು, ನನ್ನ ಪಾತ್ರಗಳು ಅದಕ್ಕೆ ತಕ್ಕಂತೆ ಬದಲಾಗಬೇಕಾಗುತ್ತದೆ. ಮಾಡಿದ್ದನ್ನೇ ಪ್ರತಿಸಲ ಮಾಡುತ್ತಿದ್ದರೆ ಸುಸ್ತಾಗಿ ಬೋರಾಗುತ್ತದೆ.

◆ **ನಿಮ್ಮ ಕಾದಂಬರಿಗಳನ್ನು ಯಾವಾಗಲೂ ಉತ್ತಮ ಪುರುಷದಲ್ಲಿ ನಿರೂಪಿಸುತ್ತಿರಿ. ಪ್ರತಿಯೊಂದರಲ್ಲೂ ಗಂಡಿಗೆ ಹಲವು ಹೆಣ್ಣುಗಳೊಂದಿಗೆ ಸಂಬಂಧವಿರುತ್ತದೆ. ಗಂಡು ಸಾಮಾನ್ಯವಾಗಿ ನಿಷ್ಕ್ರಿಯನಂತಿರುತ್ತಾನೆ. ಈ ಹೆಣ್ಣುಗಳು ಅದಕ್ಕೆ ತದ್ವಿರುದ್ಧವಾಗಿ ಅವನ ಭಯಗಳಿಗೆ, ಫ್ಯಾಂಟಸಿಗಳಿಗೆ ಕನ್ನಡಿ ಹಿಡಿಯುತ್ತಾರೆ.**

ನನ್ನ ಕೃತಿಗಳಲ್ಲಿ ಹೆಣ್ಣನ್ನು ಮೀಡಿಯಂ ಆಗಿ ಬಳಸುತ್ತೇನೆ. ಅಂದರೆ, ಯಾವುದೋ ಕ್ರಿಯೆ ಘಟಿಸಲು ಅವರು ಮಾಧ್ಯಮವಾಗಿರುತ್ತಾರೆ. ನಾಯಕನನ್ನು ಇವರು ಮುನ್ನಡೆಸಿ ಅವನು ಕಾಣಬೇಕಾದ ನೋಟಗಳನ್ನು ಕಾಣಿಸುತ್ತಾರೆ.

◆ **ಮೀಡಿಯಂ ಎನ್ನುವುದು ಯಾವ ಅರ್ಥದಲ್ಲಿ?**

ಸೆಕ್ಸ್ ಎನ್ನುವುದು ಒಂದು ರೀತಿಯಲ್ಲಿ ಆತ್ಮದ ಬದ್ಧತೆಯನ್ನು ಒಳಗೊಂಡಂತಹದ್ದು ಅಂತ ನನಗನ್ನಿಸುತ್ತದೆ. ಒಂದು ವೇಳೆ ನಿಮಗೆ ಒಳ್ಳೆಯ ಲೈಂಗಿಕ ಅನುಭವ ದಕ್ಕಿದರೆ ನಿಮ್ಮ ಗಾಯಗಳು ಮಾಯುತ್ತವೆ. ಕಲ್ಪನಾ ಶಕ್ತಿ ಹೆಚ್ಚುತ್ತದೆ. ಅದೊಂದು ರೀತಿಯಲ್ಲಿ ಉನ್ನತೀಕರಣದ ಕ್ರಿಯೆ. ಆ ಅರ್ಥದಲ್ಲಿ ನನ್ನ ಕತೆಗಳಲ್ಲಿ ಬರುವ ಹೆಣ್ಣುಗಳು ಮೀಡಿಯಂಗಳು. ಅವರು ಬರುವ ಕಾಲದ ಮುನ್ಸೂಚಕಗಳಂತೆ. ಅದಕ್ಕೆ ಅವರೇ ನನ್ನ ನಾಯಕನ ಬಳಿ ಬರುತ್ತಾರೆ. ಅವನು ಅವರ ಬಳಿ ಹೋಗುವುದಿಲ್ಲ.

◆ **ನಿಮ್ಮ ಕಾದಂಬರಿಗಳಲ್ಲಿ ಎರಡು ಬಗೆಯ ಹೆಣ್ಣನ್ನು ಕಾಣಬಹುದು. ಒಬ್ಬಳೊಂದಿಗೆ ನಿಮ್ಮ ನಾಯಕ ಬಹಳ ಗಂಭೀರವಾದ ಸಂಬಂಧ ಇಟ್ಟುಕೊಂಡಿರುತ್ತಾನೆ. ಸಾಮಾನ್ಯವಾಗಿ ಈಕೆ ಕಾಣೆಯಾಗುತ್ತಾಳೆ. ಅವಳ ನೆನಪು ಅವನನ್ನು ಕಾಡುತ್ತದೆ. ಮತ್ತೊಬ್ಬಳು ಅನಂತರ ಬರುತ್ತಾಳೆ. ಅವಳು ಅವನಿಗೆ ಹುಡುಕಾಟದಲ್ಲಿ ಇಲ್ಲವೇ ಹಿಂದಿನದನ್ನು ಮರೆಯಲು ಸಹಾಯ ಮಾಡುತ್ತಾಳೆ. ಈ ಎರಡನೆಯ ಹೆಣ್ಣು ಸಾಮಾನ್ಯವಾಗಿ ವಿಲಕ್ಷಣ ವ್ಯಕ್ತಿತ್ವದ ಮುಚ್ಚುಮರೆಯಿಲ್ಲದೆ ಮಾತಾಡಬಲ್ಲ, ಸೆಕ್ಸ್ ವಿಷಯದಲ್ಲೂ ಮುಕ್ತ ಮನೋಭಾವದ ಹೆಣ್ಣು. ನಾಯಕ ಇವಳೊಂದಿಗೆ ಹಿಂದಿನವಳಿಗಿಂತ ಹೆಚ್ಚು ಆಪ್ತವಾಗಿ, ತಮಾಷೆಯಾಗಿ ಬೆರೆಯುತ್ತಾನೆ. ಈ ಎರಡು ಬಗೆಯ ಆರ್ಕಿಟೈಪ್‌ಗಳ ಉದ್ದೇಶವೇನು?**